# ೬೭ ಕರ್ನಾಟಕ ರಾಜ್ಯೋತ್ಸವ ದಿನಾಚರಣೆ

ಹಸಿರಾಗಲಿ ಕರ್ನಾಟಕ

ವಿದ್ಯಾವರ್ಧಕ ಸಂಘ(ರಿ), ಮೈಸೂರು

ಉಸಿರಾಗಲಿ ಕನ್ನಡ

## ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು

ಶೇಷಾದ್ರಿ ಅಯ್ಯರ್ ರಸ್ತೆ, ಮೈಸೂರು

## ಕನ್ನಡ ವಿಭಾಗ ಹಾಗೂ ಐ.ಕ್ಯೂ.ಎ.ಸಿ. ಘಟಕದ ವತಿಯಿಂದ

## ೬೭ನೇ ಕರ್ನಾಟಕ ರಾಜ್ಯೋತ್ಸವ ಆಚರಣೆ

ಕನ್ನಡ ನಾಡು ನುಡಿ ಚಿಂತನೆ

ಅಧ್ಯಕ್ಷತೆ

**ಶ್ರೀ. ಗುಂಡಪ್ಪಗೌಡ**

ಗೌ॥ಅಧ್ಯಕ್ಷರು, ವಿದ್ಯಾವರ್ಧಕ ಸಂಘ(ರಿ), ಮೈಸೂರು

ಪ್ರಧಾನ ಭಾಷಣಕಾರರು

**ಡಾ.ಎ. ಆರ್.ಮದನ ಕುಮಾರ್**

ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಕನ್ನಡ ವಿಭಾಗ

ಸರ್ಕಾರಿ ಮಹಿಳಾ ಕಾಲೇಜು, ಮಂಡ್ಯ

ಮುಖ್ಯ ಅತಿಥಿಗಳು

**ಶ್ರೀ. ಪಿ. ವಿಶ್ವನಾಥ್**

ಗೌ॥ ಕಾರ್ಯದರ್ಶಿಗಳು, ವಿದ್ಯಾವರ್ಧಕ ಸಂಘ(ರಿ), ಮೈಸೂರು

**ಶ್ರೀ. ಶ್ರೀಶೈಲ ರಾಮಣ್ಣವರ್**

ಗೌ॥ ಕೋಶಾಧ್ಯಕ್ಷರು, ವಿದ್ಯಾವರ್ಧಕ ಸಂಘ(ರಿ), ಮೈಸೂರು

ಉಪಸ್ಥಿತಿ

**ಶ್ರೀ. ನಾಗರಾಜು. ಟಿ**

ಅಧ್ಯಕ್ಷರು, ಕಾಲೇಜು ನಿರ್ವಹಣಾ ಮಂಡಳಿ, ವಿ.ವ.ಪ್ರ.ದ. ಕಾಲೇಜು, ಮೈಸೂರು

**ಡಾ.ಎಸ್. ಮರೀಗೌಡ**

ಪ್ರಾಂಶುಪಾಲರು, ವಿ.ವ.ಪ್ರ.ದ. ಕಾಲೇಜು, ಮೈಸೂರು

**ದಿನಾಂಕ: 23.11.2022 ಸಮಯ: 11.00 ಗಂಟೆಗೆ | ಸ್ಥಳ: ಶ್ರೀ.ಪಿ.ಎಂ.ಚಿಕ್ಕಬೋರಯ್ಯ ಸಭಾಂಗಣ**































ವಿದ್ಯಾವರ್ಧಕ ಸಂಘ(ರಿ), ಮೈಸೂರು
ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು
ಶೇಷಾದ್ರಿ ಅಯ್ಯರ್ ರಸ್ತೆ, ಮೈಸೂರು
ಕನ್ನಡ ವಿಭಾಗ ಹಾಗೂ ಐ.ಕ್ಯೂ.ಎ.ಸಿ. ಘಟಕದ ವತಿಯಿಂದ
ಕರ್ನಾಟಕ ರಾಜ್ಯೋತ್ಸವ ಆಚರಣೆ
ಕನ್ನಡ ನಾಡು ನುಡಿ ಚಿಂತನೆ
ಪ್ರಧಾನ ಭಾಷಣಕಾರರು
ಅಧ್ಯಕ್ಷತೆ
ಶ್ರೀ. ಗುಂಡಪ್ಪಗೌಡ
ಕನ್ನಡ ವಿಭಾಗ








ಹಸಿರಾಗಲಿ ಕರ್ನಾಟಕ
ವಿದ್ಯಾವರ್ಧಕ ಸಂಘ(ರಿ), ಮೈಸೂರು
ಹಸಿರಾಗಲಿ ಕನ್ನಡ
ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜು
ಶೇಷಾದ್ರಿ ಅಯ್ಯರ್ ರಸ್ತೆ, ಮೈಸೂರು
ಕನ್ನಡ ವಿಭಾಗ ಹಾಗೂ ಐ.ಕ್ಯೂ.ಎ.ಸಿ. ಘಟಕದ ವತಿಯಿಂದ
೬೭ನೇ ಕರ್ನಾಟಕ ರಾಜ್ಯೋತ್ಸವ ಆಚರಣೆ
ಕನ್ನಡ ನಾಡು ನುಡಿ ಚಿಂತನೆ
ಅಧ್ಯಕ್ಷತೆ
ಶ್ರೀ. ಗುಂಡಪ್ಪಗೌಡ
ಗೌ|| ಅಧ್ಯಕ್ಷರು, ವಿದ್ಯಾವರ್ಧಕ ಸಂಘ(ರಿ), ಮೈಸೂರು
ಪ್ರಧಾನ ಭಾಷಣಕಾರರು
ಡಾ.ಎ. ಆರ್.ಮದನ ಕುಮಾರ್
ಪ್ರಾಧ್ಯಾಪಕರು ಹಾಗೂ ಮುಖ್ಯಸ್ಥರು, ಕನ್ನಡ ವಿಭಾಗ
ಸರ್ಕಾರಿ ಮಹಿಳಾ ಕಾಲೇಜು, ಮಂಡ್ಯ
ಮುಖ್ಯ ಅತಿಥಿಗಳು
ಶ್ರೀ. ಪಿ. ವಿಶ್ವನಾಥ್
ಶ್ರೀ. ಶ್ರೀಶೈಲ ರಾಮಣ್ಣನವರ್
ಗೌ|| ಕೋಶಾಧ್ಯಕ್ಷರು, ವಿದ್ಯಾವರ್ಧಕ ಸಂಘ(ರಿ), ಮೈಸೂರು
ಉಪಸ್ಥಿತಿ















**ಕನ್ನಡ ನಾಡು ಮತ್ತು ನುಡಿ ಬೇರೆ ಬೇರೆ ಅಲ್ಲ, ಎರಡೂ ಒಂದೇ**

–ಡಾ.ಎ.ಆರ್.ಮದನ್ ಕುಮಾರ್

ಕರ್ನಾಟಕ ರಾಜ್ಯೋತ್ಸವವು ಕನ್ನಡಿಗರಿಗೆ ನಿತ್ಯದ ಉತ್ಸವವಾಗಿದೆ. ಇದು ಸಾವಿರಾರು ಜನರ ಹೋರಟದ ಫಲವಾಗಿ ಇಂದು ಅಖಂಡ ಕರ್ನಾಟಕವಾಗಿ ನಿರ್ಮಾಣವಾಗಿದೆ. ಕನ್ನಡಿಗರ ಬದುಕಿನ ಕ್ರಮವೇ ಕನ್ನಡ ಸಂಸ್ಕೃತಿ. ಕವಿರಾಜ ಮಾರ್ಗಕಾರನ ಪ್ರಕಾರ ಕನ್ನಡವೆಂದರೆ ತಿರುಳ್ಗನ್ನಡ. ಭಾಷೆ ಎನ್ನುವುದು ಎಂದಿಗೂ ನಾಶವಾಗುವುದಲ್ಲ, ಕನ್ನಡಿಗರಿರುವವರೆಗೂ ಕನ್ನಡ ಭಾಷೆ ನೆಲೆಗೊಂಡಿರುತ್ತದೆ ಎಂದು ಮಂಡ್ಯದ ಸರ್ಕಾರಿ ಮಹಿಳಾ ಕಾಲೇಜಿನ ಕನ್ನಡ ಪ್ರಾಧ್ಯಾಪಕರಾದ ಡಾ.ಎ.ಆರ್.ಮದನ್ ಕುಮಾರ್ ಅವರು ಅಭಿಪ್ರಾಯ ಪಟ್ಟರು.

ನಗರದ ವಿದ್ಯಾವರ್ಧಕ ಪ್ರಥಮ ದರ್ಜೆ ಕಾಲೇಜಿನಲ್ಲಿ ದಿನಾಂಕ:೨೩.೧೧.೨೦೨೨ರಂದು ಕನ್ನಡ ವಿಭಾಗ ಹಾಗೂ ಐಕ್ಯೂಎಸಿ ಘಟಕದ ವತಿಯಿಂದ ೬೭ನೇ ಕರ್ನಾಟಕ ರಾಜ್ಯೋತ್ಸವ ಆಚರಣೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗಿತ್ತು. ಕಾರ್ಯಕ್ರಮದಲ್ಲಿ ಪ್ರಧಾನ ಭಾಷಣಕಾರರಾಗಿ ಆಗಮಿಸಿದ್ದ ಅವರು ಮಾತನಾಡುತ್ತಾ ಇಂದು ಕನ್ನಡ ವೈಜ್ಞಾನಿಕ ಭಾಷೆಯಾಗಿ ಪರಿವರ್ತನೆ ಹೊಂದುತ್ತಿದೆ. ಕನ್ನಡ ಎಂಬ ಮರಕ್ಕೆ ಗಟ್ಟಿಯಾದ ಬೇರುಗಳಿವೆ ವಿಶಾಲವಾದ ಈ ಮರದ ನೆರಳಿನಲ್ಲಿ ನಾವೆಲ್ಲಾ ಕನ್ನಡಿಗರು ಇದ್ದೇವೆ. ಕನ್ನಡವನ್ನು ಉಳಿಸಿಕೊಳ್ಳಬೇಕಾದರೆ ಕನ್ನಡಿಗರು ಭಾಷೆಯನ್ನು ಸ್ಪಷ್ಟವಾಗಿ ಮಾತನಾಡಬೇಕು ಅದು ಅವರ ಮನಸ್ಸುಗಳಲ್ಲಿ ಒಡಮೂಡಬೇಕು ಮತ್ತು ಅಧ್ಯಯನಶೀಲರಾಗಬೇಕು. ಇಂದು ತಂತ್ರಜ್ಞಾನವು ನಮ್ಮನ್ನು ವಿದ್ಯಾವಂತರನ್ನಾಗಿಯೂ ಮಾಡುತ್ತಿಲ್ಲ ಹಾಗೆಯೇ ಅಜ್ಞಾನಿಗಳನ್ನಾಗಿಯೂ ಮಾಡುತ್ತಿಲ್ಲ. ಆಧುನಿಕ ತಂತ್ರಜ್ಞಾನಗಳ ಜೊತೆಯಲ್ಲಿಯೇ ಭಾಷೆಯನ್ನ ಬೆಳಸಬೇಕಾಗಿದೆ. ಕನ್ನಡವು ಅತ್ಯುತ್ತಮ ಸಂಪರ್ಕ ಭಾಷೆಯೂ ಆಗಿ ಜಾಗತಿಕ ಮಟ್ಟದಲ್ಲಿ ಪ್ರಾಮುಖ್ಯತೆಯನ್ನು ಪಡೆದಿದೆ. ಕನ್ನಡವು ಮನೆಯ ಭಾಷೆಯಾಗಬೇಕು, ಮನದ ಭಾಷೆಯಾಗಬೇಕು ಕನ್ನಡ ಮಾತನಾಡುವುದರಿಂದ ನಮ್ಮ ಗೌರವಗಳು ಹೆಚ್ಚಬೇಕು ಅದಕ್ಕೆ ಇಚ್ಛಾಶಕ್ತಿಯ ಅವಶ್ಯಕತೆಯಿದೆ. ನಮ್ಮ ಮಾತೃಭಾಷೆಯಲ್ಲಿ ನಮಗೆ ಅರ್ಥವಾಗುವಂತೆ ಯಾವ ಭಾಷೆಯಲ್ಲಿಯೂ ಭಾವನೆಗಳು ಅರ್ಥವಾಗುವುದಿಲ್ಲ. ಅನ್ಯಭಾಷಿಗರು ಕನ್ನಡವನ್ನು

ಪ್ರೀತಿಸುವಷ್ಟು ನಮ್ಮವರು ನಮ್ಮ ಭಾಷೆಯನ್ನು ಪ್ರೀತಿಸಿ, ನಮ್ಮದಾಗಿ ಸ್ವೀಕರಿಸಿ ಬಳಸದಿದ್ದರೆ ಭಾಷೆಯು ಬೆಳೆಯುವುದಿಲ್ಲ. ನಾವು ಹುಟ್ಟುತ್ತಾ ವಿಶ್ವಮಾನವರಾಗಿ, ಬೆಳೆಯುತ್ತಾ ಅಲ್ಪ ಮಾನವರಾಗುತ್ತೇವೆ ಮತ್ತು ಓದಿನಿಂದ, ಜ್ಞಾನದಿಂದ ಮತ್ತೇ ವಿಶ್ವಮಾನವರಾಗುತ್ತೇವೆ ಈ ಎಲ್ಲದಕ್ಕೂ ನಮ್ಮ ಮಾತೃಭಾಷೆಯೇ ಕಾರಣ ಎಂದು ಅವರು ತಿಳಿಸಿದರು.

ಕಾರ್ಯಕ್ರಮದ ಅಧ್ಯಕ್ಷತೆಯನ್ನು ಸಂಸ್ಥೆಯ ಗೌರವ ಅಧ್ಯಕ್ಷರಾದ ಶ್ರೀ.ಗುಂಡಪ್ಪಗೌಡರವರು ವಹಿಸಿದ್ದರು. ಕಾರ್ಯಕ್ರಮದಲ್ಲಿ ಸಂಸ್ಥೆಯ ಗೌರವ ಕಾರ್ಯದರ್ಶಿಗಳಾದ ಶ್ರೀ.ಪಿ.ವಿಶ್ವನಾಥ್ ಹಾಗೂ ಸಂಸ್ಥೆಯ ಗೌರವ ಕೋಶಾಧ್ಯಕ್ಷರಾದ ಶ್ರೀ.ಶ್ರೀಶೈಲ ರಾಮಣ್ಣವರ್ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದರು. ಕಾಲೇಜಿನ ನಿರ್ವಹಣಾ ಮಂಡಳಿಯ ಅಧ್ಯಕ್ಷರಾದ ಶ್ರೀ.ಟಿ.ನಾಗರಾಜು ಹಾಗೂ ಪ್ರಾಂಶುಪಾಲರಾದ ಡಾ.ಎಸ್.ಮರೀಗೌಡರವರು ಉಪಸ್ಥಿತರಿದ್ದ ಕಾರ್ಯಕ್ರಮವನ್ನು ಕನ್ನಡ ವಿಭಾಗದ ಮುಖ್ಯಸ್ಥರಾದ ಡಾ.ಧನಂಜಯ ಪಾಲಹಳ್ಳಿ ಅವರು ಸ್ವಾಗತಿಸಿ ಡಾ.ಶ್ರೀನಿವಾಸ್.ಟಿ ನಿರೂಪಿಸಿದರು. ಕಾರ್ಯಕ್ರಮವು ವಿದ್ಯಾರ್ಥಿನಿ ಭೂಮಿಕ ಅವರ ಪ್ರಾರ್ಥನೆಯೊಂದಿಗೆ ಪ್ರಾರಂಭವಾಗಿ ಪ್ರೊ.ಸತೀಶ್.ಟಿ ಅವರ ವಂದನಾರ್ಪಣೆಯೊಂದಿಗೆ ಸಂಪನ್ನವಾಯಿತು.

ಹಸಿರಾಗಲಿ ಕರ್ನಾಟಕ ಉಸಿರಾಗಲಿ ಕನ್ನಡ